# ಹೊಳಲ್ಕೆರೆಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ ರವರ ನ್ಯಾಯಾಲಯ

## ಸಿ.ಸಿ. ನಂಃ 1016/2023

*ಪಿರ್ಯಾದಿ*ದಾರರು : *ಸರ್ಕಾರದ ಪರವಾಗಿ*-ಅಬಕಾರಿ ನಿರೀಕ್ಷಕರು ಹೊಳಲ್ಕೆರೆ ವಲಯ, ಹೊಳಲ್ಕೆರೆ ಪೋಲೀಸ್ ಠಾಣೆ

**ವಿರುದ್ಧ**

ಆರೋಪಿ ಪ್ರದೀಪ್ ಆರ್. ಬಿನ್ ಲೇಟ್ ರಾಮಾನಾಯ್ಕ

## ದೋಷಾರೋಪಣೆ

ಶ್ರೀ ಉಮೇಶ, ಎಂ.ಪಿ., ಬಿ.ಎ.ಎಲ್., ಎಲ್.ಎಲ್.ಬಿ. ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ., ಹೊಳಲ್ಕೆರೆ ಆದ ನಾನು

ಆರೋಪಿಃ *1.* ಪ್ರದೀಪ್ ಆರ್. ಬಿನ್ ಲೇಟ್ ರಾಮಾನಾಯ್ಕ
ವಯಸ್ಸುಃ *22* ವರ್ಷಗಳು, ವೃತ್ತಿಃಚಿಲ್ಲರೆ ಅಂಗಡಿ ವ್ಯಾಪಾರಿ,
ವಾಸಃ ತಣಿಗೆಹಳ್ಳಿ ಗ್ರಾಮ,
ಹೊಳಲ್ಕೆರೆ ತಾಲ್ಲೂಕು, ಚಿತ್ರದುರ್ಗ ಜಿಲ್ಲೆ

ಆರೋಪಿತನಾದ ನಿಮ್ಮ ಮೇಲೆ ಮಾಡುವ ದೋಷಾರೋಪಣೆ ಏನೆಂದರೆ,

ದಿನಾಂಕಃ 29-04-2023 ರಂದು ಸಂಜೆ 6-30 ರ ಸಮಯದಲ್ಲಿ ಹೊಳಲ್ಕೆರೆ ತಾಲ್ಲೂಕು, ಹಿರೇಕಂದವಾಡಿ ಗ್ರಾಮದ ಬಳಿ ಆರೋಪಿತನಾದ ನೀನು ಚಿತ್ರದುರ್ಗ ಬಿದುರ್ಗ ರಸ್ತೆಯ ಮಾರ್ಗದಲ್ಲಿ ಕೆಎ-16 ಇಜೆ-7883 ರ ಟಿ ವಿ ಎಸ್ ಎಕ್ಸ್-100 ದ್ವಿಚಕ್ರ ವಾಹನದಲ್ಲಿ ಬಿಳಿ ಬಣ್ಣದ ಚೀಲ ಮತ್ತು ರಟ್ಟಿನ ಪೆಟ್ಟಿಗೆಯಲ್ಲಿ ವಿವಿಧ ಮಾದರಿಯ 17.280 ಮದ್ಯ ಹಾಗೂ ರಟ್ಟಿನ ಪೆಟ್ಟಿಗೆಯಲ್ಲಿ 7.920 ಲೀಟರ್ ಬಿಯರ್ ನ್ನು ಕಾನೂನು ಬಾಹಿರವಾಗಿ ಯಾವುದೇ ಪರವಾನಿಗೆಯನ್ನು ಹೊಂದದೇ ಅಕ್ರಮವಾಗಿ ಹೆಚ್ಚಿನ ಬೆಲೆಗೆ ಮಾರಾಟ ಮಾಡುವ ಸ್ವಾಧೀನ ಹೊಂದಿ, ಈ ನ್ಯಾಯಾಲಯದ ಸಂಜ್ಞೆಯೊಳಗೆ ಕರ್ನಾಟಕ ಅಬಕಾರಿ ಕಾಯ್ದಿ ಕಲಂ 32(1) ರ ಅಡಿಯಲ್ಲಿ ಶಿಕ್ಷಾರ್ಹವಾದ ಅಪರಾಧ ಎಸಗಿರುತ್ತೀರಿ.

ಈ ಮೇಲೆ ಹೇಳಿದ ಅದೇ ದಿನ ಸ್ಥಳ ವೇಳೆಯಲ್ಲಿ ಆರೋಪಿತನಾದ ನೀವು ಕಾನೂನು ಬಾಹಿರವಾಗಿ ಸಮಕ್ಷಮ ಪ್ರಾಧಿಕಾರದ ಅನುಮತಿ ಇಲ್ಲದೇ ಕೆಎ-16 ಇಜೆ-7883 ರ ಟಿ ವಿ ಎಸ್ ಎಕ್ಸ್-100 ದ್ವಿಚಕ್ರ ವಾಹನದಲ್ಲಿ ಬಿಳಿ ಬಣ್ಣದ ಚೀಲ ಮತ್ತು ರಟ್ಟಿನ ಪೆಟ್ಟಿಗೆಯಲ್ಲಿ ವಿವಿಧ ಮಾದರಿಯ 17.280 ಮದ್ಯ ಹಾಗೂ 7.920 ಲೀಟರ್ ಬಿಯರ್ ಅಕ್ರಮವಾಗಿ ಸಾಗಾಣಿಕೆ ಮಾಡುತ್ತಿದ್ದು, ಕರ್ನಾಟಕ ಅಬಕಾರಿ ಕಾಯಿದೆ ಕಲಂ 11, 14,15 ಮತ್ತು 43(ಎ)ನ್ನು ಉಲ್ಲಂಘನೆ ಮಾಡಿ ಕಲಂ 38(ಎ) ರಡಿಯಲ್ಲಿ ಈ ನ್ಯಾಯಾಲಯದ ಸಂಜ್ಞೆಯೊಳಗೆ ಶಿಕ್ಷಾರ್ಹವಾದ ಅಪರಾಧ ಎಸಗಿರುತ್ತೀರೆಂದು ಆಪಾದಿಸಲಾಗಿದೆ.

ನೀನು ಮೇಲ್ಕಂಡ ಅಪರಾಧಕ್ಕಾಗಿ ಈ ನ್ಯಾಯಾಲಯದ ವಿಚಾರಣೆಗೆ ಗುರಿಯಾಗಬೇಕೆಂದು ಆದೇಶಿಸುತ್ತಿದ್ದೇನೆ.

ಸಿವಿಲ್ ನ್ಯಾಯಾಧೀಶರು ಮತ್ತು

ದಿ: 20-11-2023

ಜೆ ಎಂ ಎಫ್ ಸಿ, ಹೊಳಲ್ಕೆರೆ.